ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ಚಾಮರಾಜ ನಗರಕ್ಕೆ ಕುಡಿಯುವ ನೀರನ್ನೊದಗಿಸುವ ಬಗ್ಗೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಉಪಾಧ್ಯಕ್ಷರೇ, ನಾನು ನಿನ್ನೆಯ ದಿವಸ ಚಾಮರಾಜನಗರಕ್ಕೆ ಹೋಗಿದ್ದೆ. ಕಳೆದ 2 ದಿವಸಗಳಿಂದ ಚಾಮರಾಜನಗರದಲ್ಲಿ ಕುಡಿಯುವ ನೀರು ಇಲ್ಲ. ಈ ಸರ್ಕಾರ ಕುಡಿಯುವ ನೀರಿನ ಬಗ್ಗೆ ಅತ್ಯಂತ ಕಳಕಳಿ ಹೊಂದಿದೆ ಎಂದು ಹೇಳುತ್ತದೆ. ನಾಳೆ ಬೆಳಿಗ್ಗೆ ನೀರು ಹೊರಟಿತು, ನೀರು ಸಿಕ್ಕಿತು ಎಂದು ಒಂದಲ್ಲಾ ಒಂದು ರೀತಿಯಲ್ಲಿ ಸರ್ಕಾರದವರು ಹೇಳುತ್ತಿದ್ದಾರೆ. ಇವತ್ತು ಪಟ್ಟಣ ಪ್ರದೇಶದಲ್ಲಿ ನೀರಿನ ಕೊರತೆ ಇದೆ. ನಮ್ಮ ಚಾಮರಾಜನಗರಕ್ಕೆ ಸುವರ್ಣಾವತಿ ಜಲಾಶಯದಿಂದ ನೀರು ಬರಬೇಕು. ಇದು ಸಂಪೂರ್ಣವಾಗಿ ಬತ್ತಿಹೋಗಿದೆ. 80 ಸಾವಿರ ಜನಸಂಖ್ಯೆ ಇರುವ ಚಾಮರಾಜನಗರದಲ್ಲಿ 2 ದಿವಸದಿಂದ ನೀರು ಇಲ್ಲ.

ಉಪಾಧ್ಯಕ್ಷರು : ತಾವು ಏನಾದರೂ ಈ ಬಗ್ಗೆ ಬರೆದಿದ್ದೀರಾ?

ಶ್ರೀ ವಾಟಾಳ್ ನಾಗರಾಜ್ : ಇದು ಬರೆಯುವ ಪ್ರಶ್ನೆ ಅಲ್ಲ. ನಾಳೆ ನಾಳಿದ್ದು ಸಭೆ ಮುಗಿದುಹೋದಮೇಲೆ ನಾವು ಯಾರ ಹತ್ತಿರ ಹೋಗಬೇಕು? ಇವತ್ತು ಅಲ್ಲಿಯ ಪರಿಸ್ಥಿತಿ ಅತ್ಯಂತ ಶೋಚನೀಯವಾಗಿದೆ. ಇವತ್ತು ಅಲ್ಲಿ ಹೆಣ್ಣುಮಕ್ಕಳು ಬಿಂದಿಗೆ ಹೊತ್ತುಕೊಂಡು ರಸ್ತೆರಸ್ತೆಗಳಲ್ಲಿ ಕಪಿಲೆ ಬಾವಿಗಳ ಕಡೆ ಹೋಗುತ್ತಿರುವುದನ್ನು ನೋಡುತ್ತಿದ್ದೇವೆ. ಇದನ್ನು ನೋಡಿದರೆ ಸರ್ಕಾರ ಇದನ್ನು ಗಮನಿಸಿದೆಯೋ ಅಥವಾ ಬಿಟ್ಟಿದೆಯೋ ಎನ್ನುವ ಪ್ರಶ್ನೆ ಬರುತ್ತದೆ. ಮಾನ್ಯ ಮೊಯ್ಲಿಯವರು ಹಾಗೂ ಖರ್ಗೆಯವರು ಇಲ್ಲೇ ಇದ್ದಾರೆ. ನಾನು ಚಾಮರಾಜನಗರಕ್ಕೆ ನಿನ್ನೆ ಹೋಗಿ ಬಂದೆ. 2 ದಿವಸಗಳಿಂದ ನೀರಿಲ್ಲ. ನಾವು ಯಾರ ಹತ್ತಿರ ಹೋಗಬೇಕು? ಈ ಪರಿಸ್ಥಿತಿಯಾಗಿದೆ. ನಾನು ಮೊದಲಿನಿಂದಲೂ ಕಾವೇರಿ ಯೋಜನೆಯನ್ನು ಬಹಳ ತ್ವರಿತವಾಗಿ ಮಾಡಿ ಎಂದು ಹೇಳಿದೆ. ಕಾವೇರಿ ಯೋಜನೆಗೆ ಹಿಂದಿನ ಮುಖ್ಯಮಂತ್ರಿಗಳು ಅಡಿಗಲ್ಲು ಹಾಕಿ 3 ತಿಂಗಳು ಕಳೆದವು. 8 ತಿಂಗಳಿಂದ ಇವತ್ತಿನವರೆಗೆ ಕೇವಲ ನೀರು ತುಂಬತಕ್ಕ 2 ದೊಡ್ಡ ದೊಡ್ಡ ಟ್ಯಾಂಕ್‌ಗಳನ್ನು ಕಟ್ಟುತ್ತಿರುವುದು ಬಿಟ್ಟರೆ ಇನ್ನು ಯಾವ ವ್ಯವಸ್ಥೆ ಆಗಿಲ್ಲ. ಇವತ್ತು ಟಿ. ನರಸೀಪುರದಿಂದ ನೀರು ತೆಗೆದುಕೊಂಡು ಹೋಗಬೇಕಾಗಿದೆ. 23 ಹಳ್ಳಿಗಳಿಗೆ ನೀರು ಕೊಡಬೇಕಾಗಿದೆ. ಇದರ ಬಗ್ಗೆ ಸರಿಯಾದ ವ್ಯವಸ್ಥೆ ಆಗಿಲ್ಲ. ಹಿಂದಿನ ಮುಖ್ಯಮಂತ್ರಿಗಳು ಶಂಕುಸ್ಥಾಪನೆ ಮಾಡಿದರು. ಈಗಿನ ಮುಖ್ಯಮಂತ್ರಿಗಳು ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದು ಅವರು ಏನು ಮಾಡುತ್ತಿದ್ದಾರೆ? ಸರ್ಕಾರ ಇನ್ನಾದರೂ ಕೂಡಲೇ ಮಾಡುತ್ತದೆಯೇ? ಎರಡು ದಿವಸಗಳಿಂದ ನೀರಿಲ್ಲದೆ ಅಲ್ಲಿನ ಜನರು ಪಡುತ್ತಿರುವ ಕಷ್ಟ ಶೋಚನೀಯವಾಗಿದೆ. ಅಲ್ಲಿ ಲಾರಿಗಳಿಂದ ನೀರು ಒದಗಿಸಿ ಎಂದರೆ ಲಾರಿ ಸಹಾ ಇಲ್ಲ. ಇಂತಹ ಪರಿಸ್ಥಿತಿ ಅಲ್ಲಿ ಉದ್ಭವವಾಗಿದೆ. ಬೀದಿಯಲ್ಲಿ ಜನರು ತಿರುಗಾಡುವುದಕ್ಕಾಗುವುದಿಲ್ಲ. ಇವತ್ತು ರಸ್ತೆಗಳಲ್ಲಿ ಖಾಲಿ ಬಿಂದಿಗೆಗಳನ್ನು ಹೊತ್ತು ನಡೆಯುತ್ತಿರುವವರನ್ನು ನೋಡಿದರೆ ಶೋಚನೀಯವೆನಿಸುತ್ತದೆ. ಈ ಬಗ್ಗೆ ನಾವು ಕೇಳಿದರೆ ಮಾನ್ಯ ಮೊಯ್ಲಿಯವರು ಬಹಳ ಬುದ್ದಿವಂತಿಕೆಯಿಂದ ಏನಾದರೂ ಉತ್ತರ ಕೊಡುತ್ತಾರೆ. ತಾವು ತಕ್ಷಣ ಪಟ್ಟಣ ನೀರು ಸರಬರಾಜು ಯೋಜನೆಯ ಅಧಿಕಾರಿಗಳಿಗೆ ಹೇಳಬೇಕು. ಇಂತಹ ಪರಿಸ್ಥಿತಿ ಇವತ್ತು ಉದ್ಭವವಾಗಬಾರದು. ಈ ಬಗ್ಗೆ ಸರ್ಕಾರ ಪರಿಣಾಮಕಾರಿಯಾದ ಕಾರ್ಯಕ್ರಮ ಹಾಕಿಕೊಳ್ಳುತ್ತದೆಯೇ? ಕಾವೇರಿ ಯೋಜನೆ ತಮ್ಮ ಸರ್ಕಾರದ ಯೋಜನೆ. ಅದು ನೀವು ಕೊಟ್ಟ ಕೊಡುಗೆ. ಚಾಮರಾಜನಗರ ಒಂದೇ ಅಲ್ಲ, ಇಡೀ ಕರ್ನಾಟಕದ 17 ಯೋಜನೆಗಳು ಇದರಲ್ಲಿ ಸೇರಿವೆ. ಒಂದೂ ಯೋಜನೆಗಳೂ ಕೂಡಾ ಆಗಿಲ್ಲ. ಮೂರು ತಿಂಗಳಿಂದ ನಾನು ಪಟ್ಟಣ ನೀರು ಸರಬರಾಜು ಯೋಜನೆ ಅಧಿಕಾರಿಗಳ ಜೊತೆ ಮಾತನಾಡಲು ಆಕಾಶ

ಭೂಮಿಗೆ ಇಳಿದಿದ್ದೇನೆ. ನಾವು ಅವರಲ್ಲಿ ಹೋಗಿದ್ದೇನೆ. ಅವರನ್ನು ಕರೆದುಕೊಂಡು ಹೋಗಿದ್ದೇನೆ. ಎಲ್ಲೆಲ್ಲಿ ಸ್ಥಳ ತೋರಿಸಬೇಕೋ, ಏನೇನು ಅನುಕೂಲ ಮಾಡಬೇಕೋ ಅದನ್ನೆಲ್ಲಾ ಮಾಡಿದರೂ ಯಾವ ಅನುಕೂಲ ಅಲ್ಲಿಯ ಜನರಿಗೆ ಆಗಿಲ್ಲ ಅವರು ಈ ಕ್ಷೇತ್ರದ ಬಗ್ಗೆ ಪರಿಣಾಮಕಾರಿಯಾಗಿ ಪ್ರಾಮಾಣಿಕವಾಗಿ ಪ್ರಯತ್ನ ಮಾಡಿಲ್ಲ. ದಯಮಾಡಿ ಹೇಳುತ್ತಿದ್ದೇನೆ, 2 ದಿವಸದಿಂದ ನೀರು ಕೊಡುವ ಯೋಜನೆಯಲ್ಲಿ ಏನೂ ಆಗಿಲ್ಲ. ಇವತ್ತು ಅಲ್ಲಿ ಬಹಳ ಶೋಚನೀಯ ಪರಿಸ್ಥಿತಿ ಇದೆ. ಈ ಕ್ಷಣದಿಂದ ತಾವು ಅಲ್ಲಿ ಪರಿಣಾಮಕಾರಿಯಾಗಿ ನೀರು ಕೊಡುತ್ತೀರೋ ಅಥವಾ ಇಲ್ಲವೋ ತಿಳಿಸಿ. ಈ ಸದನ ಇರುವುದು ಎರಡೇ ದಿವಸ.

(ಶ್ರೀಮತಿ ನಾಗಮ್ಮ ಕೇಶವಮೂರ್ತಿ ಉಪಾಧ್ಯಕ್ಷಣೆಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ಸಚಿವರು) : ಶಾಸಕರಾದಂತಹ ಮಾನ್ಯ ವಾಟಾಳ್ ನಾಗರಾಜ್‌ರವರು ಎರಡು ಪ್ರಶ್ನೆಯನ್ನು ಎತ್ತಿದ್ದಾರೆ. ಒಂದು ಆ ಭಾಗದ ಜನರು ಏನು ನೀರಿನ ಬವಣೆಯನ್ನು ಅನುಭವಿಸುತ್ತಿದ್ದಾರೆ ಅವರಿಗೆ ತಾತ್ಕಾಲಿಕವಾಗಿ ತಕ್ಷಣ ಪರಿಹಾರ ನೀಡತಕ್ಕಂತಹ ಕಾರ್ಯಕ್ರಮವನ್ನು ತಕ್ಷಣ ತೆಗೆದುಕೊಳ್ಳಬೇಕು ಎಂಬುದು ಎರಡನೆಯದಾಗಿ ಮೂಲಭೂತವಾಗಿ ಅನೇಕ ವರ್ಷಗಳ ಕಾಲದಿಂದ ಇರುವ ಈ ಯೋಜನೆಯನ್ನು ಅನುಷ್ಠಾನಕ್ಕೆ ತರುವುದರಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಗಳು ಇನ್ನೂ ನಡೆದಿಲ್ಲ, ಶಂಕುಸ್ಥಾಪನೆ ಎಲ್ಲವೂ ಆಗಿದೆ ಆದರೆ ಇನ್ನೂ ಕೆಲಸ ಅಲ್ಲಿ ನಡೆದಿಲ್ಲವೆಂದು ಹೇಳಿದ್ದಾರೆ. ನಮ್ಮ ಕಮಿಟ್‌ಮೆಂಟ್ ಚಾಮರಾಜ ನಗರಕ್ಕೆ ಇರಬಹುದು ಅಥವಾ ಅದು ಇನ್ಯಾವ ನಗರ ಪ್ರದೇಶ, ಗ್ರಾಮಾಂತರ ಪ್ರದೇಶಕ್ಕೆ ಇರಬಹುದು ಜನರಿಗೆ ನೀರನ್ನು ಕೊಡತಕ್ಕಂಥ ವಿಚಾರದಲ್ಲಿ ಸರಕಾರ ಅದಕ್ಕೆ ಬದ್ಧತೆ ಇದೆ. ಯಾವುದೇ ಸ್ವರೂಪದಲ್ಲಿಯಾದರೂ ನೀರನ್ನು ಒದಗಿಸಿ ತಾತ್ಕಾಲಿಕವಾಗಿ ನೀರಿನ ಬವಣೆಯನ್ನು ನಿಲ್ಲಿಸತಕ್ಕಂತಹ ಪ್ರಯತ್ನವನ್ನು ನಾವು ಮಾಡೇ ಮಾಡುತ್ತೇವೆ. ಮಾನ್ಯ ಜಾರ್ಜ್‌ರವರಿಗೆ ತಿಳಿಸಿ ಅವರ ಇಲಾಖೆಯಿಂದ ಆ ತೊಂದರೆಯನ್ನು ನೀಗಿಸಲಿಕ್ಕೆ ಕ್ಷಿಪ್ರವಾಗಿ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ. ತಾವು ಹೇಳಿದ ಪ್ರಕಾರ ಈ ಕುಡಿಯುವ ನೀರಿನ ಸಮಸ್ಯೆಯನ್ನು ಮಾತಿನಿಂದ ಪರಿಹಾರ ಮಾಡುವುದಕ್ಕೆ ಸಾಧ್ಯವಿಲ್ಲ ಅಲ್ಲೇ ಇದ್ದು ಅದನ್ನು ಪರಿಹಾರ ಮಾಡಬೇಕಾಗುತ್ತದೆ. ಹಣದ ಸಂಪನ್ಮೂಲವನ್ನು ಒದಗಿಸಬೇಕು. ಸಂಪನ್ಮೂಲವಿದ್ದರೂ ಕೂಡ ಅನೇಕ ಬಾರಿ ಕೆಲವು ಕಾರ್ಯಕ್ರಮಗಳನ್ನು ಸರಿಯಾದ ಸಂಯೋಜನೆ ಇಲ್ಲದೇ ಮಾಡಿರುವುದರಿಂದ ತೊಂದರೆಯಾಗಿದೆ. ನಾವು ಸಂಬಂಧಪಟ್ಟ ಶಾಸಕರ ಅಧ್ಯಕ್ಷತೆಯಲ್ಲಿ ಆಯಾಯ ತಾಲ್ಲೂಕಿನಲ್ಲಿ ಟಾಸ್ಕ್ ಫೋರ್ಸ್ ಎಂದು ಮಾಡಿದ್ದೇವೆ. ಇದರ ಬಗ್ಗೆ ಸರಕಾರಿ ಆದೇಶ ಹೊರಟಿರಬೇಕು. ಅದನ್ನು ಮಾಡಬೇಕೆಂದು ಸರಕಾರ ಆದೇಶ ಕೊಡುತ್ತದೆ. ಅದರ ಪ್ರಕಾರ ನಾನು ಸಂಯೋಜನೆ ಅಲ್ಲಿ ನಡೆಯಬೇಕು. ತಾತ್ಕಾಲಿಕವಾಗಿ ನೀರಿನ ಸಮಸ್ಯೆಯನ್ನು ಹಣದ ಕೊರತೆಯಿಂದ ನೀರನ್ನು ಒದಗಿಸತಕ್ಕಂತಹ ಸಮಸ್ಯೆ ಖಂಡಿತವಾಗಿ ಅದು ಉಳಿಯುವುದಿಲ್ಲ ಅದನ್ನು ನೆರವೇರಿಸುತ್ತೇವೆ. ಟ್ರಾನ್ಸ್‌ಪೋರ್ಟ್ ಬೇಕಾದರೆ, ಟ್ರಾನ್ಸ್‌ಪೋರ್ಟ್ ಬೋರ್‌ವೆಲ್ ಬೇಕಾದರೆ ಬೋರ್‌ವೆಲ್ ಹಣದ ಕೊರತೆಯಿಂದ ಕುಡಿಯುವ ನೀರಿನ ತೊಂದರೆಯನ್ನು...

SRI P.G.R SINDHIA : If you yield for a minute...

SRI M. VEERAPPA MOILY : I am not giving a regular answer. I am not the minister incharge.

ಮಾನ್ಯ ನಾಗರಾಜ್‌ರವರು ಎತ್ತಿರತಕ್ಕಂಥ ಗಂಭೀರವಾದ ಸಮಸ್ಯೆ ಏನು ಇದೆ ಅದರ ಬಗ್ಗೆ ಸರಕಾರ ಪ್ರಯತ್ನ ಮಾಡಿಲ್ಲವೆಂದು ನಾನು ಹೇಳುವುದಿಲ್ಲ. ನಿಮ್ಮ ಕಂದಾಯ ಇಲಾಖೆಯಿಂದ ಪ್ರಯತ್ನ ಆಗುತ್ತಿದೆ.

ಆದರೆ ಹಣ ಬಿಡುಗಡೆಯಾಗುತ್ತಿಲ್ಲ. ಇನ್ನು 5-6 ದಿನಗಳಲ್ಲಿ ಎಲ್ಲಾ ಶಾಸಕರಿಗೆ ಅವರು ಹೇಳಿದ ಕಡೆಗಳಲ್ಲಿ 10-10 ಬೋರ್‌ವೆಲ್‌ಗಳನ್ನು ಹಾಕಿಸುತ್ತೇವೆಂದು ಹೇಳಿದ್ದಾರೆ. ಆ ಲಿಸ್ಟ್‌ನ್ನು ತಹಸೀಲ್ದಾರ್‌ರವರೂ ಕೂಡ ತೆಗೆದುಕೊಂಡು ಹೋಗಿದ್ದಾರೆ. 31ನೇ ತಾರೀಖು 20 ಕೋಟಿ ರೂಪಾಯಿಯನ್ನು ನೀಡಿದರೆ ಜಿಲ್ಲೆಗೆ 1-1 ಕೋಟಿಯನ್ನಾದರೂ ರಿಲೀಸ್ ಮಾಡಿರೆ ಅನುಕೂಲವಾಗುತ್ತದೆ. ಚಾಮರಾಜನಗರ ಒಂದೇ ಅಲ್ಲ ಎಲ್ಲರಿಗೂ ಅನುಕೂಲವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಅದನ್ನು ನಾನು ಹೇಳುವುದಿಲ್ಲ. ನಾನು ಕಂದಾಯ ಸಚಿವರನ್ನಾಗಲೀ ಸರಕಾರವನ್ನಾಗಲೀ ದೂಷಣೆ ಮಾಡುತ್ತಿಲ್ಲ. ನನಗೆ ಕೆಲಸ ಆಗಬೇಕಾಗಿದೆ ಅಷ್ಟೆ. ಎಷ್ಟು ಒತ್ತಾಯ ಮಾಡಿ ಕೇಳಿದರೂ ಕೂಡ ಕೊಡುವುದಕ್ಕೆ ತಯಾರಾಗಿದ್ದಾರೆ. ಆದರೆ ನಮಗೆ 2 ದಿವಸದಿಂದ ನೀರಿಲ್ಲ. ಕಾವೇರಿ ಯೋಜನೆ ನಿಮಗೆ ಸಂಬಂಧಪಟ್ಟಿದ್ದು ಅಲ್ಲ. ಇದಕ್ಕಾಗಿ 30 ಭಾಗ ಸರಕಾರದ ಹಣ 20 ಭಾಗ ಮುನಿಸಿಪಾಲಿಟಿ ಹಣ, 50 ಭಾಗ ಎಲ್.ಐ.ಸಿ.ಯ ಹಣ ಸೇರಿಸಿ ಕೊಟ್ಟು ಮಾಡಬೇಕೆಂದಾಗಿದೆ. ಇದನ್ನು ಬೇಗನೆ ತೆಗೆದುಕೊಂಡು ಮುಗಿಸಿದರೆ ಜನರಿಗೆ ಅನುಕೂಲವಾಗುತ್ತದೆ. ಚಾಮರಾಜನಗರವೂ ಸೇರಿದಂತೆ ' ಆಗಸ್ಟ್ ಅಂದರೆ ಇಂದಿನ 8ನೇ ತಾರೀಖು ಎಂದು ಅನಿಸುತ್ತದೆ. ಆಗ ಶಂಕುಸ್ಥಾಪನೆಯಾಯಿತು ಅಲ್ಲಿಂದ ಇಲ್ಲಿಯವರೆಗೆ ಒಂದು ಪೈಪ್‌ಲೈನ್ ಕೊಳವೆ ಹಾಕುವುದು ಶುರುವಾಗಿಲ್ಲ. ಎಲ್ಲಿ ನೀರು ತೆಗೆಯುತ್ತಾರೆಂಬುದೂ ಕೂಡ ಗೊತ್ತಾಗಿಲ್ಲ ಶುರು ಮಾಡುತ್ತೇವೆಂದು ಹೇಳುತ್ತೀರಿ. ಅಧಿಕಾರಿಗಳನ್ನು ಕೇಳಿದರೆ ನಮ್ಮ ಹತ್ತಿರ ಈ ವರ್ಷ ಹಣವಿಲ್ಲವೆಂದು ಹೇಳುತ್ತಾರೆ. ರಾಜ್ಯಪಾಲರ ಭಾಷಣದಲ್ಲಿ ಹೇಳಿದಿರಿ ಸರಕಾರದ ಆಜ್ಞೆ ಹೊರಡಿಸುತ್ತದೆ ಎಂದು ಹೇಳಿದ್ದೀರಿ. ಆಯವ್ಯಯದಲ್ಲೂ ಕೂಡ ಹಣ ಖರ್ಚು ಮಾಡುತ್ತೇವೆಂದು ಹೇಳಿದಿರಿ ಆದರೆ ಅದು ನಿಧಾನವಾಗುತ್ತಿದೆ. ಅಧಿಕಾರಿಗಳನ್ನು ಕೇಳಿದರೆ ಏಪ್ರಿಲ್ ಮೊದಲನೇ ವಾರದಲ್ಲಿ ಪ್ರಯತ್ನ ಮಾಡೋಣವೆಂದು ಹೇಳುತ್ತಾರೆ.

ಅತಿಮುಖ್ಯವಾಗಿ ಈಗ ಕಾವೇರಿ ಕುಡಿಯುವ ನೀರಿನ ಯೋಜನೆ ಬಹಳ ಬೇಗ ಆಗಬೇಕು. ಪುರಸಭೆಗಳ ವ್ಯಾಪ್ತಿಯಲ್ಲಿ ಬರತಕ್ಕ ಕುಡಿಯುವ ನೀರಿನ ಯೋಜನೆಗಳಿಂದ ಎರಡು ದಿವಸಗಳಿಗೆ ಒಂದು ಸಾರಿ ನೀರನ್ನು ಒದಗಿಸುತ್ತಿಲ್ಲ. ನೀರನ್ನು ಒದಗಿಸುವ ವ್ಯವಸ್ಥೆ ಏನಾದರೂ ಮಾಡುತ್ತೀರಾ ಎನ್ನುವುದನ್ನು ಕೂಡಲೇ ಹೇಳಬೇಕು.

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಅಧ್ಯಕ್ಷರೆ, ಪ್ರಥಮವಾಗಿ ಬೇಗ ಮಾಡುತ್ತೇವೆಂದು ನಾನು ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ಎರಡನೆಯದಾಗಿ ಮಾನ್ಯ ಸದಸ್ಯರು ಚಾಮರಾಜನಗರ ಕುಡಿಯುವ ನೀರಿನ ಯೋಜನೆ ಸರಿಯಾಗಿಲ್ಲವೆಂದು ಅದು ಕೆಲಸ ಮಾಡುತ್ತಿಲ್ಲವೆಂದು ಹೇಳುತ್ತಿದ್ದಾರೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಭಾಷಣಕ್ಕೆ ಉತ್ತರ ಕೊಡುವಾಗ ಹೇಳಿದ್ದಾರೆ. ಗ್ರಾಮಾಂತರ ಪ್ರದೇಶಗಳ ಕಾರ್ಯಕ್ರಮವಿರಬಹುದು, ಪಟ್ಟಣಪ್ರದೇಶಗಳ ಕಾರ್ಯಕ್ರಮವಿರಬಹುದು ಪ್ರತಿಯೊಂದಕ್ಕೂ ಹಣಕಾಗಿನ ಸಚಿವರು ಉತ್ತರ ಕೊಟ್ಟಿದ್ದಾರೆ. ಇಲ್ಲಿ ಹೇಳಿಕೆಯನ್ನು ಸಹ ಕೊಟ್ಟಿದ್ದಾರೆ. ತಾಂತ್ರಿಕವಾದ ವಿಚಾರಗಳು ಏನು ಇದ್ದರೂ ಕೂಡ ಅದನ್ನು ಪರಿಹಾರ ಮಾಡುತ್ತೇವೆಂದು ಸದನದಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ. ಆ ಯೋಜನೆಯನ್ನು ಅನುಷ್ಠಾನಕ್ಕೆ ತರುತ್ತೇವೆ, ಮಂಜೂರು ಮಾಡುತ್ತೇವೆಂದು ಹೇಳಿದ್ದಾರೆ. ಹಣವನ್ನು ಒದಗಿಸಲಿಕ್ಕೆ ಬೇರೆ ಬೇರೆ ತಾಂತ್ರಿಕ ಕಾರಣಗಳು ಇದ್ದರೂ ಮುಂದೆ ಬರತಕ್ಕ ದಿವಸಗಳಲ್ಲಿ ಸರ್ಕಾರ ಬದ್ಧವಾಗಿದೆ ಚಾಮರಾಜನಗರ ವಿಚಾರ ಏನಿದೆ ಅದನ್ನು ಸರಿಪಡಿಸಿ ಆದಷ್ಟುಬೇಗ ಕಾರ್ಯಗತ ಮಾಡುವುದಕ್ಕೆ ಹಣವನ್ನು ಒದಗಿಸುತ್ತೇವೆ. ಕಾರ್ಯಕ್ರಮವನ್ನು ಸರಿಯಾಗಿ ನಿಯೋಜಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ನನ್ನ ಮನಸ್ಸಿಗೆ ಬಹಳ ನೋವಾಗಿದೆ. ನಿನ್ನೆ ತಾನೇ ನಾನು ಹೋಗಿ ಬಂದಿದ್ದೇನೆ. ಈ ಸರ್ಕಾರದ ನೀತಿಯನ್ನು ಪ್ರತಿಭಟಿಸಿ

ನಾನು ಹೊರಗಡೆ ಹೋಗಬೇಕಾಗಿದೆ. ನನ್ನ ಮನಸ್ಸಿಗೆ ಬಹಳ ನೋವಾಗಿದೆ. ನಾನು ನಿನ್ನೇತಾನೇ ಅಲ್ಲಿಗೆ ಹೋಗಿದ್ದೆ. ನಾನು ವಾರಕ್ಕೆ ಎರಡು ಸಾರಿ ಅಲ್ಲಿಗೆ ಹೋಗುತ್ತಿದ್ದೇನೆ. ಅಲ್ಲಿನ ಜನರು ಕಷ್ಟವನ್ನು ನೋಡುವುದಕ್ಕಾಗುವುದಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಸದಸ್ಯರು ಸ್ವಲ್ಪ ಈಲ್ಡ್ ಆಗುವುದಾದರೆ, ತಾವು ಬಹಳ ಚೆನ್ನಾಗಿ ಹೇಳುತ್ತೀರಿ. ಕುಡಿಯುವ ನೀರಿನ ಸಮಸ್ಯೆ ದಿನನಿತ್ಯದ ಪ್ರಶ್ನೆ. ಹೌಸ್ ನಾಳೆ ನಾಡಿದ್ದು ಎರಡೂ ದಿವಸ ನಡೆಯುತ್ತದೆ. ತಾವು ಸಭೆಯಿಂದ ವಾಕ್‌ಔಟ್ ಮಾಡುವುದು ಇದ್ದರೆ ನಾಡಿದ್ದೂ ಮಾಡಬಹುದು.. ಅಷ್ಟು ನಮ್ಮ ಮೇಲೆದಯೆ ಇರಲಿ.

ಉಪಾಧ್ಯಕ್ಷರು : ನಿಮಗೆ ಇದಕ್ಕಿಂತ ಇನ್ನೇನು ಹೇಳಬೇಕು. ಮಾನ್ಯ ಸದಸ್ಯರು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಚಿವರು ನನಗೆ ಕೊಟ್ಟ ಭರವಸೆಗಳು ಏನಾಗಿವೆ? ಮಾನ್ಯ ಸಚಿವರ ಮೇಲೆ ಅಪಾರವಾದ ಗೌರವವಿದೆ. ಮಾನ್ಯ ಖರ್ಗೆಯವರ ಬಗ್ಗೆ ಅಪಾರವಾದ ಗೌರವವಿದೆ. ನನ್ನ ತೀವ್ರತೆ ಏನಿದೆ ನನ್ನ ಕಳಕಳಿ ಏನಿದೆ ಅದನ್ನು ಹೇಳುವುದಕ್ಕಾಗಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ. ನನಗೆ ತೀವ್ರತೆ ಮತ್ತು ಕಳಕಳಿಯಿದೆ. ನನಗೆ ನೀವು ಏನು ಹೇಳುತ್ತೀರಿ ಅಂದರೆ "ಮೂಗಿಗೆ ತುಪ್ಪ ಹಚ್ಚಿ ವಾಸನೆ ಕುಡಿ" ಅಂತಹಾಗೆ ನಾಳೆ ಮಾಡುತ್ತೇವೆಂದು ಹೇಳುವುದು ಬೇಡ. ನಿನ್ನೆ ನಾನು ಅಲ್ಲಿಗೆ ಹೋಗಿ ಸುತ್ತಾಡಿಕೊಂಡು ಬಂದಿದ್ದೇನೆ. ಅಲ್ಲಿ ಕೇಳುವವ ಗತಿಯಿಲ್ಲ. ಗಡಿ ಪ್ರದೇಶಗಳ ಅಭಿವೃದ್ಧಿ ಮಾಡುತ್ತೇವೆಂದು ಹೇಳುತ್ತೀರಿ ಅದರಂತೆ ನಮ್ಮ ತಾಲ್ಲೂಕಿಗೆ ಅನುಕೂಲ ಮಾಡಿಕೊಡಬೇಕು. ಇದು ನನಗೆ ಸರಿ ಕಾಣುವುದಿಲ್ಲ. ಸರ್ಕಾರದ ಈ ನಿರ್ಲಕ್ಷೆ ಮನೋಭಾವನೆಯನ್ನು ಪ್ರತಿಭಟಿಸಿ ನಾನು ಸುತ್ಯಾಗಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಎಂ. ವೀರಪ್ಪ ಮೊಯಿಲಿ : ಬರೀ ನೀರಿನಿಂದ ಅವರ ಮನಸ್ಸಿಗೆ ಸಮಾಧಾನವಾಗುವುದಿಲ್ಲ. ಅವರ ಮನಸ್ಸಿನ ಸಮಾಧಾನಕ್ಕಾಗಿ ಹೊರಗೆ ಹೋಗುತ್ತಿದ್ದಾರೆ.

ಶ್ರೀ ಬಿ.ಎಂ. ಇದಿನಬ್ಬ : ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲೂ ಕುಡಿಯುವ ನೀರಿನ ಪರಿಸ್ಥಿತಿ ಹೀಗೆ ಉಂಟು.

ಶಾಸನರಚನಾ ಕಾರ್ಯಕಲಾಪಗಳು

1991ನೇ ಸಾಲಿನ ಕರ್ನಾಟಕ ಸ್ಥಳೀಯ ಪ್ರದೇಶಗಳೊಳಗೆ ಬಳಕೆ ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ, ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷರೆಯರೆ, 1991ನೇ ಸಾಲಿನ ಕರ್ನಾಟಕ ಸ್ಥಳೀಯ ಪ್ರದೇಶಗಳೊಳಗೆ ಬಳಕೆ ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯೋಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ "1991ನೇ ಸಾಲಿನ ಕರ್ನಾಟಕ ಸ್ಥಳೀಯ ಪ್ರದೇಶಗಳೊಳಗೆ ಅಲ್ಲಿಗೆ ಬಳಕೆ ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು